|| ಓಂ ಶ್ರೀ ದುರ್ಗಾಯೈ ನಮಃ ||

# ಮಾರ್ಕಂಡೇಯ ಪುರಾಣಂ

## ತ್ರಿಪಂಚಾಶತ್ತಮೋಽಧ್ಯಾಯಃ

### (ಗಙ್ಗಾವತಾರವರ್ಣನಮ್)

**ಮಾರ್ಕಣ್ಡೇಯ ಉವಾಚ :—**

**ಧರಾಧಾರಂ ಜಗದ್ಯೋನೇಃ ಪದಂ ನಾರಾಯಣಸ್ಯ ಚ ।**
**ತತಃ ಪ್ರವೃತ್ತಾ ಯಾ ದೇವೀ ಗಙ್ಗಾ ತ್ರಿಪಥಗಾಮಿನೀ ||೧||**

**ಸಾ ಪ್ರವಿಶ್ಯ ಸುಧಾಯೋನಿಂ ಸೋಮಮಾಧಾರಮಮ್ಭಸಾಮ್ ।**
**ತತಃ ಸಂವರ್ಧಮಾನಾರ್ಕರಶ್ಮಿಸಙ್ಗತಿಪಾವನೀ ||೨||**

---

## ಐವತ್ತಮೂರನೆಯ ಅಧ್ಯಾಯ

ಮಾರ್ಕಂಡೇಯ ಮುನಿಯು ಹೇಳಿದನು :—

೧. ಜಗತ್ತಿಗೆ ಕಾರಣನಾದ ಶ್ರೀಮನ್ನಾರಾಯಣನ ಪಾದಪದ್ಮವು ಭೂಮಿಯಸ್ಥಿತಿಗೆ ಆಧಾರವಾಗಿದೆ. ಆ ಪಾದಪದ್ಮದಿಂದ ಸ್ವರ್ಗ–ಮರ್ತ್ಯ–ಪಾತಾಲಗಳಲ್ಲಿ ಪ್ರವಹಿಸುವ ದೇವಿಯಾದ ಗಂಗೆಯು ಹುಟ್ಟಿರುವಳು.

೨. ಆ ಗಂಗೆಯು ಹುಟ್ಟಿದ ಕೂಡಲೆ ಅಮೃತಕ್ಕೆ ಕಾರಣನೂ, ಜಲಗಳಿಗೆ ಆಧಾರನೂ ಆದ ಚಂದ್ರನನ್ನು ಪ್ರವೇಶಿಸಿ ಮುಂದೆ ವೃದ್ಧಿಹೊಂದುತ್ತ ಸೂರ್ಯರಶ್ಮಿಗಳ ಸಂಪರ್ಕದಿಂದ ಪಾವನಗಳಾಗಿ ಮುಂದೆ ಮುಂದೆ ಹರಿಯಿತು.

ಪಪಾತ ಮೇರುಪೃಷ್ಠೇ ಚ ಸಾ ಚತುರ್ಧಾ ತತೋ ಯಯೌ ।
ಮೇರುಕೂಟತಟಾನ್ತೇಭ್ಯೋ ನಿಪತನ್ತೀ ವಿವರ್ತಿತಾ ॥೩॥

ವಿಕೀರ್ಯಮಾಣಸಲಿಲಾ ನಿರಾಲಮ್ಬಾ ಪಪಾತ ಸಾ ।
ಮನ್ದರಾದ್ಯೇಷು ಪಾದೇಷು ಪ್ರವಿಭಕ್ತೋದಕಾ ಸಮಮ್ ॥೪॥

ಚತುರ್ಷ್ವಪಿ ಪಪಾತಾಮ್ಬುವಿಭಿನ್ನಾಜ್ಘ್ರಿಶಿಲೋಚ್ಚಯಾ ।
ಪೂರ್ವಾ ಸೀತೇತಿ ವಿಖ್ಯಾತಾ ಯಯೌ ಚೈತ್ರರಥಂ ವನಮ್ ॥೫॥

ತತ್ಪ್ಲಾವಯಿತ್ವಾ ಚ ಯಯೌ ವರುಣೋದಂ ಸರೋವರಮ್ ।
ಶೀತಾನ್ತಂ ಚ ಗಿರಿಂ ತಸ್ಮಾತ್ತತಶ್ಚಾನ್ಯಾನ್ಗಿರೀನ್ಕ್ರಮಾತ್ ॥೬॥

ಗತ್ವಾ ಭುವಂ ಸಮಾಸಾದ್ಯ ಭದ್ರಾಶ್ವೇ ಜಲಧಿಂ ಗತಾ ।
ತಥೈವಾಲಕನನ್ದಾಖ್ಯಾ ದಕ್ಷಿಣೇ ಗನ್ಧಮಾದನೇ ॥೭॥

---

೩. ಹಾಗೆಯೇ ಬಂದು ಮೇರುಪರ್ವತದ ತಪ್ಪಲಿನಲ್ಲಿ ಬಿದ್ದಿತು. ಅಲ್ಲಿಂದ ನಾಲ್ಕುಭಾಗವಾಗಿ ಹರಿದುಹೋಯಿತು. ಹಾಗು ಮೇರುಗಿರಿಯ ಶಿಖರ ಭಾಗದ ತಪ್ಪಲುಗಳಿಂದ ಕೆಳಗೆ ಬೀಳುತ್ತ ಅಲ್ಲಲ್ಲಿ ಹೊರಳಾಡಿದಂತೆ ಪ್ರವಹಿಸಿತು.

೪. ಮತ್ತು ಎರಚಲ್ಪಟ್ಟಂತೆ ಆದ ನೀರುಳ್ಳದ್ದಾಗಿ ಆಲಂಬನವಿಲ್ಲದೆ ಮಂದರ ಮುಂತಾದ ಉಪಪರ್ವತಗಳಲ್ಲಿ ವಿಭಾಗವಾಗಿ ಹರಿಯುವ ನೀರಿನ ಪ್ರವಾಹದಿಂದ ಕೂಡಿ ಕೆಳಗೆ ಧುಮುಕಿತು.

೫. ಹಾಗೆ ಬೀಳುವ ಜಲವೇಗದಿಂದ ಉಪಪರ್ವತಗಳ ಶಿಖರವನ್ನು ಭೇದಿಸುತ್ತ ನಾಲ್ಕು ದಿಕ್ಕುಗಳಲ್ಲಿ ಬಿತ್ತು. ಇವುಗಳಲ್ಲಿ ಸೀತಾ ಎಂದು ಖ್ಯಾತಿ-ಪಡೆದ ಪ್ರವಾಹವು ಚೈತ್ರರಥವೆಂಬ ವನದಲ್ಲಿ ಹರಿಯಿತು.

೬. ಚೈತ್ರರಥವನವನ್ನು ಜಲಮಯವನ್ನಾಗಿ ಮಾಡಿ ವರುಣೋದ ಸರೋವರಕ್ಕೆ ಹೋಯಿತು. ಮುಂದೆ ಶೀತಾರ್ತವೆಂಬ ಗಿರಿಯನ್ನು ಹೊಂದಿ ಅಲ್ಲಿಂದ ಕ್ರಮವಾಗಿ ಎಲ್ಲ ಪರ್ವತಗಳಲ್ಲಿಯೂ ಹರಿಯಿತು.

೭. ಹಾಗೆಯೇ ಭೂಮಿಯನ್ನು ಹೊಂದಿ ಭದ್ರಾಶ್ವವರ್ಷದಲ್ಲಿ ಸಮುದ್ರಕ್ಕೆ ಸೇರಿತು. ದಕ್ಷಿಣದಿಕ್ಕಿನಲ್ಲಿ ಪ್ರವಹಿಸಿದ ಪ್ರವಾಹವು ಅಲಕನಂದಾ ಎಂದು ಪ್ರಸಿದ್ಧವಾಯಿತು. ಅದು ಗಂಧಮಾದನಪರ್ವತದಲ್ಲಿ ಹರಿಯಿತು.

ಮೇರುಪಾದೇ ವನಂ ಗತ್ವಾ ನನ್ದನಂ ದೇವನನ್ದನಮ್ ।
ಮಾನಸಂ ಚ ಮಹಾವೇಗಾತ್ಪ್ಲಾವಯಿತ್ವಾ ಸರೋವರಮ್ ॥೮॥

ಆಸಾದ್ಯ ಶೈಲರಾಜಾನಂ ರಮ್ಯಂ ತ್ರಿಶಿಖರಂ ಗತಾ ।
ತಸ್ಮಾಚ್ಚ ಪರ್ವತಾನ್ಸರ್ವಾನ್ದಕ್ಷಿಣೇ ಯೇ ಕ್ರಮೋದಿತಾಃ ॥೯॥

ತಾನ್ಪ್ಲಾವಯಿತ್ವಾ ಸಮ್ಪ್ರಾಪ್ತಾ ಹಿಮವನ್ತಂ ಮಹಾಗಿರಿಮ್ ।
ದಧಾರ ತತ್ರ ತಾಂ ಶಮ್ಭುರ್ನ ಮುಮೋಚ ವೃಷಧ್ವಜಃ ॥೧೦॥

ಭಗೀರಥೇನೋಪವಾಸೈಃ ಸ್ತುತ್ಯಾ ಚಾರಾಧಿತೋ ವಿಭುಃ ।
ತತ್ರ ಮುಕ್ತಾ ಚ ಶರ್ವೇಣ ಸಪ್ತಧಾ ದಕ್ಷಿಣೋದಧಿಮ್ ॥೧೧॥

---

೮. ಆ ಅಲಕನಂದಾ ನದಿಯು ಮೇರುಗಿರಿಯ ಪಾದದಲ್ಲಿ ಬಂದು ದೇವತೆಗಳಿಗೆ ಆನಂದವನ್ನು ಕೊಡುವ ನಂದನವನವನ್ನು ಪಾವನವನ್ನಾಗಿಮಾಡಿ ಬಲುವೇಗದಿಂದ ಮಾನಸಸರೋವರವನ್ನು ತುಂಬಿಸಿತು.

೯. ಮತ್ತು ಶೈಲರಾಜನೆನಿಸಿರುವ ರಮ್ಯವಾದ ತ್ರಿಶಿಖರಪರ್ವತಕ್ಕೆ ಬಂದು ಅಲ್ಲಿಂದ ಹೊರಟು ಹಿಂದೆ ನನ್ನಿಂದ ಹೇಳಲ್ಪಟ್ಟಿರುವ ದಕ್ಷಿಣದಿಕ್ಕಿನ ಪರ್ವತಶ್ರೇಣಿಯಲ್ಲೆಲ್ಲ ಪ್ರವಹಿಸಿತು.

೧೦. ಹೀಗೆ ಆ ಪರ್ವತಗಳನ್ನು ಜಲಮಯವನ್ನಾಗಿ ಪಾವನ-ಗೊಳಿಸುತ್ತ ಮಹಾಗಿರಿಯಾದ ಹಿಮಾಚಲಪರ್ವತಕ್ಕೆ ಬಂದಿತು. ಅಲ್ಲಿ ವೃಷಭ-ಚಿಹ್ನದ ಧ್ವಜವುಳ್ಳ ಈಶ್ವರನು ಸ್ತಂಭನಮಾಡಿದನು. ಮುಂದೆ ಚಲಿಸಲು ಬಿಡಲಿಲ್ಲ.

೧೧. ಆಗ ಭಗೀರಥರಾಜನಿಂದ ಸರ್ವೇಶ್ವರನಾದ ಶಂಕರನು ಉಪವಾಸ-ಸ್ತುತಿಪಾಠ ಮುಂತಾದ ಬಗೆಗಳಿಂದ ಆರಾಧಿಸಲ್ಪಟ್ಟನು. ತರುವಾಯ ಪ್ರಸನ್ನನಾದ ಈಶ್ವರನಿಂದ ಬಿಡಲ್ಪಟ್ಟ ನದಿಯು ಏಳುಭಾಗವಾಗಿ ಸಮುದ್ರಕ್ಕೆ ಸಂಗಮವಾಯಿತು.

ಪ್ರವಿವೇಶ ತ್ರಿಧಾ ಪ್ರಾಚ್ಯಾಂ ಪ್ಲಾವಯನ್ತೀ ಮಹಾನದೀ ।
ಭಗೀರಥರಥಸ್ಯಾನು ಸ್ರೋತಸೈಕೇನ ದಕ್ಷಿಣಾಮ್ ॥೧೨॥

ತಥೈವ ಪಶ್ಚಿಮೇ ಪಾದೇ ವಿಪುಲೇ ಸಾ ಮಹಾನದೀ ।
ಸುಚಕ್ಷುರಿತಿ ವಿಖ್ಯಾತಾ ವೈಭ್ರಾಜಂ ಸಾ ವನಂ ಯಯೌ ॥೧೩॥

ಶೀತೋದಂ ಚ ಸರಸ್ತಸ್ಮಾತ್ಪ್ಲಾವಯನ್ತೀ ಮಹಾನದೀ ।
ತಸ್ಮಾತ್ಕ್ರಮೇಣ ಚಾದ್ರೀಣಾಂ ಶಿಖರೇಷು ನಿಪತ್ಯ ಸಾ ॥೧೪॥

ಸುಚಕ್ಷುಃ ಪರ್ವತಂ ಪ್ರಾಪ್ತಾ ತತಶ್ಚ ತ್ರಿಶಿಖಂ ಗತಾ ।
ಕೇತುಮಾಲಂ ಸಮಾಸಾದ್ಯ ಪ್ರವಿಷ್ಟಾ ದಕ್ಷಿಣೋದಧಿಮ್ ॥೧೫॥

ಗತ್ವೋತ್ತರಾಂ ದಿಶಂ ಗಙ್ಗಾ ದಿವ್ಯಾ ಸಾ ಚ ಮಹಾನದೀ ।
ತಸ್ಮಾಚ್ಚ ಋಷಭಾದೀಂಶ್ಚ ಕ್ರಮಾದುತ್ತರಜಾನ್ನಗಾನ್ ॥೧೬॥

---

೧೨. ಅವುಗಳಲ್ಲಿ ಆ ಮಹಾನದಿಯ ಮೂರು ಪ್ರವಾಹಗಳು ಆಯಾಯ ಪ್ರದೇಶಗಳನ್ನು ವ್ಯಾಪಿಸುತ್ತ ಪೂರ್ವದಿಕ್ಕಿಗೆ ಪ್ರವಹಿಸಿದುವು. ಒಂದು ಪ್ರವಾಹವು ಭಗೀರಥರಾಜನನ್ನು ಹಿಂಬಾಲಿಸುತ್ತ ದಕ್ಷಿಣದಿಕ್ಕಿಗೆ ಹರಿಯಿತು.

೧೩. ಹಾಗೆಯೇ ವಿಸ್ತಾರವಾದ ಪಶ್ಚಿಮದಿಕ್ಕಿನ ಪರ್ವತಪಾದದಲ್ಲಿ ಹರಿದಿರುವ ನದಿಯು ಸುಚಕ್ಷು ಎಂದು ಖ್ಯಾತಿಯನ್ನು ಹೊಂದಿತು. ಅದು ವೈಭ್ರಾಜವೆಂಬ ವನವನ್ನು ಪ್ರವೇಶಿಸಿತು.

೧೪. ಆ ಮಹಾನದಿಯು ಶೀತೋದಸರೋವರವನ್ನು ತುಂಬಿಸಿ ಪಾವನಗೊಳಿಸಿ ಅಲ್ಲಿಂದ ಮುಂದೆ ಕ್ರಮವಾಗಿ ಹಿಂದೆ ಹೇಳಿರುವ ಗಿರಿಗಳ ಶಿಖರಗಳಲ್ಲಿ ಬಿದ್ದು ಪ್ರವಹಿಸಿತು.

೧೫. ಆ ಸುಚಕ್ಷು ನದಿಯು ಅನೇಕ ಪರ್ವತಗಳನ್ನು ಹೊಕ್ಕು ಹಾಗೆಯೇ ತ್ರಿಶಿಖಗಿರಿಯನ್ನು ಹೊಂದಿತು. ಕಡೆಯಲ್ಲಿ ಕೇತುಮಾಲ ವರ್ಷದಲ್ಲಿ ಪ್ರವಹಿಸುತ್ತ ದಕ್ಷಿಣ ಸಮುದ್ರವನ್ನು ಸೇರಿತು.

೧೬. ದಿವ್ಯವೂ ಮಹಾನದಿಯೂ ಆದ ಗಂಗೆಯು ಉತ್ತರದಿಕ್ಕನ್ನು ಹೊಂದಿ ಅಲ್ಲಿಂದ ಕ್ರಮವಾಗಿ ಋಷಭ ಮುಂತಾದ ಉತ್ತರದಿಕ್ಕಿನ ಶ್ರೇಣಿಯ ಪರ್ವತಗಳನ್ನು ಪ್ರವೇಶಮಾಡಿತು.

ಸುಪಾರ್ಶ್ವಂ ತು ತಥೈವಾದ್ರಿಂ ಮೇರುಪಾದಂ ಹಿ ಸಾ ಗತಾ ।
ಭದ್ರಸೋಮೇತಿ ವಿಖ್ಯಾತಾ ಸಾ ಯಯೌ ಸವಿತುರ್ವನಮ್ ॥೧೭॥

ತತ್ಪಾವಯನ್ತೀ ಸಂಪ್ರಾಪ್ತಾ ಮಹಾಭದ್ರಂ ಸರೋವರಮ್ ।
ತತಶ್ಚ ಶಙ್ಖಕೂಟಂ ಸಾ ಪ್ರಯಾತಾ ವೈ ಮಹಾನದೀ ॥೧೮॥

ತಸ್ಮಾಚ್ಚ ವೃಷಭಾದೀನ್ಯಾ ಕ್ರಮಾತ್ಪ್ರಾಪ್ಯ ಶಿಲೋಚ್ಚಯಾನ್ ।
ಮಹಾರ್ಣವಮನುಪ್ರಾಪ್ತಾ ಪ್ಲಾವಯಿತ್ವೋತ್ತರಾನ್ಕುರೂನ್ ॥೧೯॥

ಏವಮೇಷಾ ಮಯಾ ಗಙ್ಗಾ ಕಥಿತಾ ತೇ ದ್ವಿಜರ್ಷಭ ।
ಜಮ್ಬೂದ್ವೀಪಸನಿವೇಶಶ್ಚ ವರ್ಷಾಣಿ ಚ ಯಥಾತಥಮ್ ॥೨೦॥

ವಸನ್ತಿ ತೇಷು ಸರ್ವೇಷು ಪ್ರಜಾಃ ಕಿಮ್ಪುರುಷಾದಿಷು ।
ಸುಖಪ್ರಾಯಾ ನಿರಾತಙ್ಕಾ ನ್ಯೂನತೋತ್ಕರ್ಷವರ್ಜಿತಾಃ ॥೨೧॥

---

೧೭. ಉತ್ತರದಿಕ್ಕಿನ ಪ್ರವಾಹವು ಭದ್ರಸೋಮಾ ಎಂಬ ನಾಮಾಂಕಿತ-ವಾದ ನದಿಯಾಗಿ ಆ ನದಿಯು ಮೇರುಪರ್ವತದ ಉಪಪರ್ವತವಾದ ಸುಪಾರ್ಶ್ವ ಅದ್ರಿಯನ್ನು ಹೊಕ್ಕು ಅಲ್ಲಿಂದ ಮುಂದೆ ಸಾವಿತ್ರವನವನ್ನು ಪ್ರವೇಶಿಸಿತು.

೧೮. ಭದ್ರಸೋಮಾನದಿಯು ಸಾವಿತ್ರವನವನ್ನು ಪಾವನಗೊಳಿಸುತ್ತ ಮಹಾಭದ್ರಸರೋವರವನ್ನು ಪ್ರವೇಶಮಾಡಿತು. ತರುವಾಯ ಆ ಮಹಾನದಿಯು ಶಂಖಕೂಟಪರ್ವತವನ್ನು ಹೊಂದಿತು.

೧೯. ಆ ಪರ್ವತದಿಂದ ಕ್ರಮವಾಗಿ ಋಷಭ ಮುಂತಾದ ಪರ್ವತಗಳ ಸಾಲನ್ನು ಹೊಂದಿ ಉತ್ತರಕುರುಕ್ಷೇತ್ರ ಪ್ರದೇಶದಲ್ಲಿ ಹರಿಯುತ್ತ ಬಂದು ಮಹಾಸಮುದ್ರದಲ್ಲಿ ಸೇರಿತು.

೨೦. ದ್ವಿಜೋತ್ತಮನೇ ! ಈ ರೀತಿಯಾಗಿ ನಿನಗೆ ನನ್ನಿಂದ ಗಂಗಾವ-ತಾರವು ಹೇಳಲ್ಪಟ್ಟಿರುವುದು ಮತ್ತು ಜಂಬುದ್ವೀಪದ ಸನ್ನಿವೇಶ, ಅಲ್ಲಿರುವ ವರ್ಷಗಳ ವಿಭಾಗ—ಇವುಗಳು ಯಥಾವತ್ತಾಗಿ ಹೇಳಲ್ಪಟ್ಟವೆ.

೨೧. ಕಿಂಪುರುಷ ಮುಂತಾದ ಎಲ್ಲ ವರ್ಷಖಂಡಗಳಲ್ಲಿ ವಾಸಮಾಡುವ ಪ್ರಜೆಗಳು ಸುಖಮಯರೂ, ಆತಂಕವಿಲ್ಲದವರೂ ಮತ್ತು ಉತ್ಕರ್ಷ–ಅಪಕರ್ಷ-ಗಳಿಲ್ಲದವರೂ ಆಗಿರುವರು.

ನವಸ್ವಪಿ ಚ ವರ್ಷೇಷು ಸಪ್ತ ಸಪ್ತ ಕುಲಾಚಲಾಃ ।
ಏಕೈಕಸ್ಮಿಂಸ್ತಥಾ ದೇಶೇ ನದ್ಯಶ್ಚಾದ್ರಿವಿನಿಸ್ಸೃತಾಃ ॥೨೨॥

ಯಾನಿ ಕಿಮ್ಪುರುಷಾದ್ಯಾನಿ ವರ್ಷಾಣ್ಯಷ್ಟೌ ದ್ವಿಜೋತ್ತಮ ।
ತೇಷೂದ್ಭಿಜ್ಜಾನಿ ತೋಯಾನಿ ನೈವಂ ವಾರ್ಯತ್ರ ಭಾರತೇ ॥೨೩॥

ವಾರ್ಕ್ಷೀ ಸ್ವಾಭಾವಿಕೀ ದೇಶ್ಯಾ ತೋಯೋತ್ಥಾ ಮಾನಸೀ ತಥಾ ।
ಕರ್ಮಜಾ ಚ ನೃಣಾಂ ಸಿದ್ಧಿರ್ವರ್ಷೇಷ್ವೇತೇಷು ಚಾಷ್ಟಸು ॥೨೪॥

ಕಾಮಪ್ರದೇಭ್ಯೋ ವೃಕ್ಷೇಭ್ಯೋ ವಾರ್ಕ್ಷೀ ಸಿದ್ಧಿಃ ಸ್ವಭಾವಜಾ ।
ಸ್ವಾಭಾವಿಕೀ ಸಮಾಖ್ಯಾತಾ ತೃಪ್ತಿರ್ದೇಶ್ಯಾ ಚ ದೈಶಿಕೀ ॥೨೫॥

---

೨೨. ಜಂಬುದ್ವೀಪದಲ್ಲಿರುವ ಒಂಭತ್ತು ವರ್ಷಗಳಲ್ಲಿಯೂ ಏಳೇಳು ಕುಲಪರ್ವತಗಳಿರುವುವು. ಮತ್ತು ಒಂದೊಂದು ಸ್ಥಳದಲ್ಲಿಯೂ ಪರ್ವತಗಳಲ್ಲಿ ಹುಟ್ಟುವ ಅನೇಕ ನದಿಗಳು ಹರಿಯುವುವು.

೨೩. ಎಲೈ ದ್ವಿಜಶ್ರೇಷ್ಠನೆ! ಕಿಂಪುರುಷ ಮುಂತಾದ ವರ್ಷಗಳು ಹಿಂದೆ ನನ್ನಿಂದ ಹೇಳಲ್ಪಟ್ಟಿವೆಯಷ್ಟೆ. ಅವುಗಳಲ್ಲಿ ಜಲವು ಭೂಮಿಯನ್ನು ಭೇದಿಸಿ ಹುಟ್ಟುವುದು. ಆದರೆ ಭಾರತವರ್ಷದಲ್ಲಿ ಹಾಗೆ ಜಲವು ಉತ್ಪತ್ತಿಯಾಗುವುದಿಲ್ಲ.

೨೪. ಕಿಂಪುರುಷ ಮುಂತಾದ ಎಂಟು ವರ್ಷಗಳಲ್ಲಿ ಪ್ರಜೆಗಳಿಗೆ ವೃಕ್ಷಗಳಿಂದ ಲಭಿಸುವ ಸಿದ್ಧಿ, ಸ್ವಾಭಾವಿಕಸಿದ್ಧಿ, ದೇಶ್ಯಸಿದ್ಧಿ, ಜಲಸಿದ್ಧಿ, ಕರ್ಮಜಸಿದ್ಧಿ ಮತ್ತು ಮಾನಸಸಿದ್ಧಿ ಎಂಬ ಆರು ಸಿದ್ಧಿಗಳು ಇರುತ್ತವೆ.

೨೫. ಇಷ್ಟಾರ್ಥಗಳನ್ನು ಕೊಡುವ ವೃಕ್ಷಗಳಿಂದ ಲಭಿಸುವ ಸಿದ್ಧಿಯು ವಾರ್ಕ್ಷೀ ಸಿದ್ಧಿಯು, ಸ್ವಭಾವಲಭ್ಯವಾದ ಸಿದ್ಧಿಯು ಸ್ವಾಭಾವಿಕಸಿದ್ಧಿಯು. ಆಯಾಯ ದೇಶಮಹಿಮೆಯಿಂದ ಲಭಿಸುವ ಸಿದ್ಧಿಯು ದೇಶ್ಯಸಿದ್ಧಿಯೆಂದು ಕರೆಯಲ್ಪಡುವುದು.

ಅಪಾಂ ಸೌಕ್ಷ್ಮ್ಯಾಚ್ಚ ತೋಯೋತ್ಥಾ ಧ್ಯಾನೋಪೇತಾ ಚ ಮಾನಸೀ ।
ಉಪಾಸನಾದಿ ಕಾರ್ಯಾತ್ತು ಕರ್ಮಜಾ ಸಾಪ್ಯುದಾಹೃತಾ ॥೨೬॥

ನ ಚೈತೇಷು ಯುಗಾವಸ್ಥಾ ನಾಧಯೋ ವ್ಯಾಧಯೋ ನ ಚ ।
ಪುಣ್ಯಾಪುಣ್ಯಸಮಾರಮ್ಭಾ ನೈವ ತೇಷು ದ್ವಿಜೋತ್ತಮ ॥೨೭॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಗಙ್ಗಾವತಾರ ವರ್ಣನಂ
ನಾಮ ತ್ರಿಪಞ್ಚಾಶತ್ತಮೋಽಧ್ಯಾಯಃ

---

೨೬. ಹಾಗು ಜಲದ ಸೂಕ್ಷ್ಮತೆಯಿಂದ ಬೇಕಾದುದನ್ನು ಜಲದಿಂದಲೇ ಹೊಂದುವ ಸಿದ್ಧಿಯು ಜಲಸಿದ್ಧಿಯೆನಿಸುವುದು. ಧ್ಯಾನದಿಂದ ಲಭಿಸುವ ಸಿದ್ಧಿಯು ಮಾನಸೀಸಿದ್ಧಿಯು. ಮತ್ತು ಉಪಾಸನ ಮುಂತಾದ ಕರ್ಮಾನುಷ್ಠಾನದಿಂದ ಲಭಿಸುವ ಸಿದ್ಧಿಯು ಕರ್ಮಜಸಿದ್ಧಿಯು.

೨೭. ಎಲೈ ದ್ವಿಜವರ್ಯನೇ! ಆ ಪರ್ವತ-ದ್ರೋಣಿಗಳಲ್ಲಿ ಯುಗ-ನಿಮಿತ್ತದಿಂದಾಗುವ ಅವಸ್ಥೆಗಳು, ದೇಹವ್ಯಾಧಿ ಮನೋವ್ಯಾಧಿಗಳು ಅಥವಾ ಪುಣ್ಯ–ಪಾಪಗಳ ಉದ್ಯಮಗಳು ಇವಾವುದೂ ಇಲ್ಲ.

ಮಾರ್ಕಂಡೇಯ ಮಹಾಪುರಾಣದಲ್ಲಿ ಐವತ್ತಮೂರನೆಯ
ಅಧ್ಯಾಯವು ಮುಗಿದುದು.